# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–473/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/09/2016

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ ಶೋಭ ಕೋಂ ಶರಣಪ್ಪ ಕಾರಂದೆ, ಅಧ್ಯಕ್ಷರು, ಶಿರಶ್ಯಾಡ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಾಪುರ ಜಿಲ್ಲೆ ಇವರು ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*–*–*

1. ದೂರುದಾರರಾದ ಶ್ರೀ ಭೂಮಗೊಂಡ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಎದುರುದಾರರು ಶಿರಶ್ಯಾಡ ಗ್ರಾಮ ಪಂಚಾಯತಿ ವತಿಯಿಂದ 2012–13ನೇ ಸಾಲಿನಲ್ಲಿ ಮಾಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮತ್ತು ಸಂಪೂರ್ಣ ನೈರ್ಮಲ್ಯ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆ ಮಾತ್ರ ತಯಾರಿಸಿದ್ದು, ಕಾಮಗರಿಗಳನ್ನು ಕೈಗೊಂಡಿರುವುದಿಲ್ಲ. ಸಂಪೂರ್ಣ ನೈರ್ಮಲ್ಯ ಯೋಜನೆಯಡಿಯಲ್ಲಿ ಶೌಚಾಲಯಗಳನ್ನು ಕಟ್ಟದೆ ಫಲಾನುಭವಿಗಳಿಗೆ ಚೆಕ್‌ಗಳನ್ನು ವಿತರಿಸಲಾಗಿದೆ. ಶಿರಶಾಡ ಗ್ರಾಮದಲ್ಲಿ ನೀರಿನ ತೊಂದರೆ ಇಲ್ಲದಿದ್ದರೂ ಸಹ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದಂತೆ ತೋರಿಸಿ ಸುಳ್ಳು ಬಿಲ್ಲುಗಳನ್ನು ಸೃಷ್ಟಿಸಿ ಹಣ ಪಾವತಿ ಮಾಡಿಕೊಂಡಿರುತ್ತಾರೆ. ನರೇಗಾ ಯೋಜನೆಯಡಿಯಲ್ಲಿ ಕೆಲವು ಕಾಮಗಾರಿಗಳು ಆಗಿದ್ದರೂ ಸಹ ಅವುಗಳ ಸೂಕ್ತ ಪರಿಶೀಲನೆಯ ನಂತರ ಬಿಲ್ಲುಗಳನ್ನು ಪಾವತಿಸಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಆದ್ದರಿಂದ, ದೂರುದಾರರು ಎದುರುದಾರರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಎದುರುದಾರರಾದ ಶ್ರೀಮತಿ ಶೋಭಾರವರು ಇಂಡಿ ತಾಲ್ಲೂಕಿನ ಶಿರಶ್ಯಾಡ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿರುತ್ತಾರೆ. ಅವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ 2012 ರಿಂದ ಗ್ರಾಮ ಪಂಚಾಯತಿಯಲ್ಲಿ ವಿವಿಧ ಯೋಜನೆಗಳು ಕ್ರಿಯಾ ಯೋಜನೆ ಪ್ರಕಾರವೇ ಕಾಮಗಾರಿಗಳು ಅನುಷ್ಠಾನಗೊಳ್ಳುತ್ತವೆ. ಎಲ್ಲಾ ಕಮಿಟಿಯ ಅನುಸಾರವೆ, ಕಮಿಟಿಯ ಅನುಮೋದನೆ ಪ್ರಕಾರ ಕಾಮಗಾರಿ ಅನುಷ್ಠಾನಗೊಂಡಿರುತ್ತದೆ. ಇದಲ್ಲದೇ ಶೌಚಾಲಯವನ್ನು ಕಟ್ಟಿಕೊಂಡಿರುವ ಫಲಾನುಭವಿಗಳಿಗೆ ಕಟ್ಟಿರುವ ಶೌಚಾಲಯವನ್ನು ಪರಿಶೀಲಿಸಿ ಹಣ ಬಿಡುಗಡೆ ಮಾಡಲಾಗಿರುತ್ತದೆ. ಶಿರಶ್ಯಾಡ ಗ್ರಾಮದಲ್ಲಿ ಗ್ರಾಮಸ್ಥರು

ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಗ್ರಾಮದಲ್ಲಿ ನೀರಿಲ್ಲವೆಂದು ಟ್ಯಾಂಕ್ ಮುಖಾಂತರ ನೀರು ಸರಬರಾಜು ಮಾಡಲು ಕೋರಿದ್ದು, ಅದರಂತೆ ಗ್ರಾಮ ಪಂಚಾಯತಿ ವತಿಯಿಂದ ಟ್ಯಾಂಕರ್‌ಗಳಲ್ಲಿ ನೀರನ್ನು ಪೂರೈಸಲಾಗಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳಿಂದ ನೀರನ್ನು ಟ್ಯಾಂಕ್ ಮೂಲಕ ಹಂಚಲು ಆದೇಶಿಸಿದಂತೆ ಎಲ್ಲಾ ಗ್ರಾಮಸ್ಥರಿಗೂ ನೀರನ್ನು ಟ್ಯಾಂಕರ್‌ನಲ್ಲಿ ಸರಬರಾಜು ಮಾಡಲಾಗಿರುತ್ತದೆ. ಗ್ರಾಮದ ಜನರಿಂದ ಕರವಸೂಲಿ ಮಾಡಿ ಕರವಸೂಲಿ ಹಣವನ್ನು ಬ್ಯಾಂಕ್‌ಗೆ ಕಾಲ ಕಾಲಕ್ಕೆ ಜಮಾ ಮಾಡಲಾಗಿರುತ್ತದೆ. ಸದರಿ ಹಣದಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಗ್ರಾಮ ಪಂಚಾಯತಿ ಕಮಿಟಿಯ ಅನುಮೋದನೆ ಪಡೆದು ಅಭಿವೃದ್ಧಿಗಾಗಿ ಹಣವನ್ನು ವಿನಿಯೋಗಿಸಲಾಗಿದೆ. ಆದ್ದರಿಂದ ಪಂಚಾಯತಿ ವತಿಯಿಂದ ಯಾವುದೇ ಹಣ ದುರುಪಯೋಗವಾಗಿಲ್ಲವೆಂದು ತಿಳಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆಯ ಮೇರೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

4. ದೂರಿನ ಅಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಹಲವಾರು ಕಾಮಗಾರಿಗಳನ್ನು ಕ್ರಿಯಾ ಯೋಜನೆ ಪ್ರಕಾರ ಮಾಡಿರುವುದಾಗಿ ಎದುರುದಾರರು ತಿಳಿಸಿದ್ದರೂ ಸಹ, 2012-13ನೇ ಸಾಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶಿರಶ್ಯಾಡ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ 1ನೇ ಎದುರುದಾರರು ಭಾಗ-1 ಮುಂದುವರೆದ ಕಾಮಗಾರಿಗಳನ್ನು ಭಾಗ-2 ಹೊಸ ಕಾಮಗರಿಗಳ ನಮೂನೆಯನ್ನು ಹಾಜರುಪಡಿಸಿದ್ದು ಅದರಲ್ಲಿ ಯಾವ ಕಾಮಗಾರಿಗಾಗಿ ಎಷ್ಟು ಹಣವನ್ನು ಸಂದಾಯ ಮಾಡಲಾಗಿರುತ್ತದೆ ಎಂಬ ಬಗ್ಗೆ ನಮೂದಿಸಿರುವುದಿಲ್ಲ. ಬಹುತೇಕ ನಮೂನೆಗಳು ಖಾಲಿ ಇರುತ್ತದೆ. ಆದರೆ ಆ ಖಾಲಿ ನಮೂನೆಗಳಿಗೇನೇ ಗ್ರಾಮ ಪಂಚಾಯತಿಯ ಅಧ್ಯಕ್ಷರು ಸಹಿ ಮಾಡಿರುವುದು ಕಂಡುಬರುತ್ತದೆ. 09/01/2013 ಎಂದು ನಮೂದಾಗಿರುವ ಮೂಲ ಭಾಗ-1 ಇದರ ಯೋಜನೆ ಗೋಷಾವಾರೆ ಅನುಷ್ಠಾನ 2013-14 ಎಂದು ಇರುವ ನಮೂನೆಯಲ್ಲಿ ಕೆಲಸ ವಿವರ ಎಂಬ ಕಾಲಂನಲ್ಲಿ ಹೊಸ ಕಾಮಗಾರಿಗಳು ಎಂದು ಮಾತ್ರ ನಮೂದು ಮಾಡಲಾಗಿದ್ದು ಅದರಡಿಯಲ್ಲಿ ನಿಗಧಿಪಡಿಸಿದ ಅನುದಾನವಾದ ರೂ. 5,62,700/-ಗಳನ್ನು ಖರ್ಚು ಮಾಡಿರುವ ಬಗ್ಗೆ ಕಂಡುಬರುತ್ತದೆ. ಆದರೆ, ಹೊಸ ಕಾಮಗಾರಿಗಳು ಯಾವುದು ಎಂಬುದು ಈ ನಮೂನೆಯಲ್ಲಿ ಇರುವ ಮಾಹಿತಿಯಿಂದ ಕಂಡುಬರುವುದಿಲ್ಲ. ಸದರಿ ನಮೂನೆಯನ್ನು ಹಾಜರುಪಡಿಸಲಾಗಿದೆ. ಅದೇ ರೀತಿ 2012-13ನೇ ಸಾಲಿಗೆ ನೀರು ನಿರ್ವಾಹಣೆಗಾಗಿ ಎಂದು ಹಣವನ್ನು ಖರ್ಚು ಮಾಡಿರುವ ಅಂದಾಜು ಮೊತ್ತ ತೋರಿಸುವ ಕಲಂ-5ರಲ್ಲಿ ರೂ. 1.5 ಲಕ್ಷಗಳನ್ನು ನೀರು ನಿರ್ವಾಹಣೆಗಾಗಿ ಖರ್ಚು ಮಾಡಿರುವುದು ಕಂಡುಬರುತ್ತದೆ. ಸದರಿ ನಮೂನೆಯನ್ನು ಹಾಜರುಪಡಿಸಲಾಗಿದೆ. ನೀರು ನಿರ್ವಾಹಣೆಗಾಗಿ ತೋರಿಸಿರುವ ನಮೂನೆಯನ್ನು ಪರಿಶೀಲಿಸಿದಲ್ಲಿ

2012–13ನೇ ಸಾಲಿಗೆ ನೀರು ನಿರ್ವಾಹಣೆಗಾಗಿ ರೂ. 1.5 ಲಕ್ಷ ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜಿಲ್ಲಾಧಿಕಾರಿಯವರ ದಿನಾಂಕ:08/08/2014ರ ಆದೇಶದ ಪ್ರಕಾರ ಹಣವನ್ನು ಟ್ಯಾಂಕರ್‌ನಲ್ಲಿ ನೀರು ಸರಬರಾಜು ಮಾಡಲು ವಿನಿಯೋಗಿಸಿರುವುದಾಗಿ ತಿಳಿಸಿರುತ್ತಾರೆ. ಜಿಲ್ಲಾಧಿಕಾರಿಯವರು ಹೊರಡಿಸಿರುವ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಆದೇಶವನ್ನು ಪರಿಸೀಲಿಸಿದಲ್ಲಿ ಹೊರಡಿಸಿದ ಆದೇಶದ ದಿನಾಂಕದಿಂದ 1 ತಿಂಗಳು ಮಾತ್ರ ಜಾರಿಯಲ್ಲಿರುತ್ತದೆಂದು ಮಾತ್ರ ತಿಳಿಸಲಾಗಿದೆ. ಆದರೆ 2012–13ನೇ ಸಾಲಿಗೆ ರೂ.1.5 ಲಕ್ಷ ಹಣವನ್ನು ನೀರು ನಿರ್ವಾಹಣೆಗಾಗಿ ಖರ್ಚು ಮಾಡಿರುವುದಾಗಿ ಪಂಚಾಯತಿ ವತಿಯಿಂದ ತೋರಿಸಿದ್ದು, ಇದು ಜಿಲ್ಲಾಧಿಕಾರಿಯವರ ಆದೇಶದನ್ವಯ ಖರ್ಚು ಮಾಡಿರುವುದಿಲ್ಲ ಎಂದು ಸ್ಪಷ್ಟಪಡುತ್ತದೆ. ಏಕೆಂದರೆ ಜಿಲ್ಲಾಧಿಕಾರಿಯವರ ಆದೇಶ 2014ನೇ ಇಸವಿಗೆ ಸಂಬಂಧಿಸಿದ್ದಾಗಿರುತ್ತದೆ. ಮೇಲೆ ಹೇಳಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಿಳಿಸಿರುವಂತೆ ಕ್ರಿಯಾ ಯೋಜನೆಗಳು ಅನುಷ್ಠಾನಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಆದ್ದರಿಂದ ದೂರುದಾರರು ಮಾಡಿರುವ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ **ಶ್ರೀಮತಿ ಶೋಭ ಕೋಂ ಶರಣಪ್ಪ ಕಾರಂದೆ, ಅಧ್ಯಕ್ಷರು, ಶಿರಶ್ಯಾಡ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಾಪುರ ಜಿಲ್ಲೆ** ಇವರ ವಿರುದ್ಧ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಅಡಿ ಕ್ರಮ ಕೈಗೊಳ್ಳಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

27/9/16